ವಿಷಯ :- ಹೇಮಾವತಿ ಜಲಾಶಯದ ಅಚ್ಚುಕಟ್ಟು ಪ್ರದೇಶದ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 963 (1983)

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಿಂದ ಹೇಮಾವತಿ ಜಲಾಶಯದಿಂದ ಬಿಟ್ಟ ನೀರಿನ ಪ್ರಮಾಣವೆಷ್ಟು ; (ತಿಂಗಳವಾರು ವಿವರಗಳನ್ನು ನೀಡುವುದು)

ಆ) ಹಾಸನ, ಅರಕಲಗೂಡು ನಗರಗಳಿಗೆ ಕುಡಿಯುವ ನೀರಿನ ತೊಂದರೆ ಹಾಗೂ ಹೇಮಾವತಿ ಅಚ್ಚುಕಟ್ಟುದಾರರಿಗೆ ಸರಿಯಾಗಿ ನೀರು ಬಿಡುಗಡೆ ಆಗದೆ, ಬೆಳೆ ಒಣಗಿ ರೈತರು ಕಷ್ಟ-ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :-

ಅ) ತಿಂಗಳವಾರು ವಿವರಗಳು ಈ ಕೆಳಕಂಡಂತಿವೆ.

ತಿಂಗಳು		ಜಲಾಶಯದಿಂದ ನಾಲೆಗಳಿಗೆ ಬಿಟ್ಟಿರುವ ನೀರಿನ ಪ್ರಮಾಣ (ಟಿ.ಎಂ.ಸಿ)	ಜಲಾಶಯದಿಂದ ನದಿಗೆ ಬಿಟ್ಟಿರುವ ನೀರಿನ ಪ್ರಮಾಣ (ಟಿ.ಎಂ.ಸಿ.)
ಜೂನ್	95	0.061	1.326
ಜುಲೈ	95	0.917	1.297
ಆಗಸ್ಟ್	95	5.682	2.793
ಸೆಪ್ಟೆಂಬರ್	95	7.224	4.954
ಅಕ್ಟೋಬರ್	95	8.096	1.586
ನವೆಂಬರ್	95	7.756	1.490
ಡಿಸೆಂಬರ್	95	6.810	1.475
ಜನವರಿ	96	0.498	3.066
ಫೆಬ್ರವರಿ	96	0.047	1.240
ಮಾರ್ಚ್	96	0.596	2.151
ಏಪ್ರಿಲ್	96	0.327	2.038
ಮೇ	96	0.307	4.239
	ಒಟ್ಟು	38.321	27.655

ಅ) ಇಲ್ಲ

Monthwise details are as below :

Year		Qunty. of water let-out from the dam into canals	Qunty. of water let-out from dam into the river
June	95	0.061	1.326
July	95	0.917	1.297
August	95	5.682	2.793
September	95	7.224	4.954
October	95	8.096	1.586
November	95	7.756	1.490
December	95	6.810	1.475
January	96	0.498	3.066
February	96	0.047	1.240
March	96	0.596	2.151
April	96	0.327	2.038
May	96	0.307	4.239
	TOTAL	38.321	27.655

ವಿಷಯ :- ಉಡುಪಿ ನಗರ ಅರಕ್ಷಕ ಠಾಣೆಯ ಸ್ವಂತ ಕಟ್ಟಡದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 965 (1855)

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನಗರ ಅರಕ್ಷಕ ಠಾಣೆಗೆ ನಿವೇಶನ ಮಂಜೂರಾಗಿದ್ದು, 1996-97 ನೇ ಸಾಲಿನಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆಯಾದ ಹಣವೆಷ್ಟು (ವಿವರ ನೀಡುವುದು) ;